**2ನೇ ಅಪರ ಸಿ.ಜೆ. ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಮದ್ದೂರು**
**ಅಸಲು ದಾವೆ ಸಂಖ್ಯೆ. 104/2012**
**ಪಿ ಡಬ್ಲ್ಯೂ-1**

**ದಿ:16.03.2023 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: 1 ರಿಂದ 5 ಮತ್ತು 9ನೇ ಪ್ರತಿವಾದಿ ಪರ ಶ್ರೀ ಹೆಚ್ ಆರ್ ವಕೀಲರವರಿಂದ:-**

1. ನಾನು ಬಿ.ಎ., ವ್ಯಾಸಂಗ ಮಾಡಿರುತ್ತೇನೆ. ನನ್ನ ತಂದೆಯ ತಂದೆ ಹೆಸರು ಭೈರಶೆಟ್ಟಿ. ಭೈರಶೆಟ್ಟಿರವರ ಹೆಂಡತಿಯ ಹೆಸರು ರಾಮರತ್ನಮ್ಮ. ಭೈರಶೆಟ್ಟಿ ಮತ್ತು ರಾಮರತ್ನಮ್ಮರವರಿಗೆ ಎಷ್ಟು ಜನ ಮಕ್ಕಳು ಎಂದರೆ ಸಾಕ್ಷಿಯು 6 ಜನ ಮಕ್ಕಳು ಎಂದು ನುಡಿಯುತ್ತಾರೆ. ಮೊದಲನೆಯವರು ಗಿರಿಜಮ್ಮ, ಎರಡನೆಯವರು ವಿವೇಕಾನಂದ, ಮೂರನೆಯವರು ರಮೇಶ್, ನಾಲ್ಕನೆಯವರು ಸರಸ್ವತಿ, ಐದನೆಯವರು ಲಕ್ಷ್ಮೀ, ಆರನೆಯವರು ನಾಗೇಶ್ . ಅವರ ಪೈಕಿ ಗಿರಿಜಮ್ಮರವರು ಪೌತಿಯಾಗಿರುತ್ತಾರೆ. ನಿಮ್ಮ ತಂದೆ, ರಮೇಶ್ ಮತ್ತು ನಾಗಭೂಷಣರವರ ನಡುವೆ ವಿಭಾಗವಾಗಿರುವುದಿಲ್ಲ ಎಂದರೆ ಸರಿ. ನಮ್ಮ ತಾತ ಭೈರಶೆಟ್ಟಿರವರ ಮರಣನಾಂತರ ಕುಟುಂಬದ ಯಜಮಾನಿಕೆಯನ್ನು ನಾಗಭೂಷಣರವರೆ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. ಈ ದಾವಾ ದಾಖಲಾಗುವ ಎಲ್ಲಾ ವ್ಯವಹಾರಗಳನ್ನು ನಾಗಭೂಷಣರವರೆ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ. 1985 ರಲ್ಲಿ ಕೆಸ್ತೂರು ಗ್ರಾಮದ ಸರ್ವೆ ನಂ:307/4 ಎ ರಲ್ಲಿ 5 ಗುಂಟೆ, 306/3 ರಲ್ಲಿ 16 ಗುಂಟೆ, 307/3 ರಲ್ಲಿ 15 ಗುಂಟೆ ಜಮೀನನ್ನು ಒಟ್ಟಾಗಿ 36 ಗುಂಟೆ ಜಮೀನನ್ನು ನನ್ನ ತಾತ ಹೆಣ್ಣುಮಕ್ಕಳ ಮದುವೆಯ ಖರ್ಚಿಗಾಗಿ ಮಾರಾಟ ಮಾಡಿರುತ್ತಾರೆಂದರೆ ಸರಿ. ದಾವಾ ಅನುಸೂಚಿ ಸ್ವತ್ತುಗಳು ಎಲ್ಲವೂ ನನ್ನ ತಾತನ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ನಾನು, ನನ್ನ ತಂದೆ, ರಮೇಶ್ ಮತ್ತು ನಾಗಭೂಷಣರವರನ್ನು ಸೇರಿಸಿ ಭಾಗ ಕೋರಿರುತ್ತೇನೆಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಮ್ಮ ತಂದೆ ಮತ್ತು ಅವರ ಸಹೋದರರ ನಡುವೆ ವಿಭಾಗ ಆಗದೇ ಇರುವುದರಿಂದ ನಿಮಗೆ ಭಾಗ ಕೊಡಲು ಆಗುವುದಿಲ್ಲ ಎಂದು ನನ್ನ ತಂದೆ ಹೇಳಿರುತ್ತಾರೆಂದರೆ ಸರಿಯಲ್ಲ. ನಾನು ಪಂಚಾಯಿತಿ ಸೇರಿಸಿ ಕೇಳಿದಾಗ ಸಂಬಂಧಪಟ್ಟ ನ್ಯಾಯಾಲಯದಲ್ಲಿ ದಾವಾ ಸಲ್ಲಿಸಿ ಪಡೆದುಕೊಳ್ಳುವಂತೆ ತಿಳಿಸಿರುತ್ತಾರೆಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

2. ನನ್ನ ತಾತ ರಾಮಚಂದ್ರರವರಿಗೆ ಮಾರಾಟ ಮಾಡಿದ ಜಮೀನುಗಳನ್ನು ರಾಮಚಂದ್ರರವರು ಕೆಸ್ತೂರಿನ ಪುಟ್ಟಶೆಟ್ಟಿರವರ ಮಗ ಕೆ ಪಿ ರಾಜುರವರಿಗೆ ದಿ:10.10.1994

ರಂದು ಮಾರಾಟ ಮಾಡಿರುತ್ತಾರೆಂದರೆ ಸರಿ. ಸದರಿ ರಾಜುರವರು ಚಿಕ್ಕದಾಸೇಗೌಡರ ಮಗಳು ಜಯಮ್ಮರವರಿಗೆ ದಿ:06.09.2001 ರಂದು ಸದರಿ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆಂದರೆ ಸರಿ. ಸದರಿ ಆಸ್ತಿಗಳು ಮಾರಾಟವಾಗಿರುವುದರಿಂದ ಅವುಗಳಲ್ಲಿ ನನಗೆ ಭಾಗ ಕೇಳಲು ಬರುವುದಿಲ್ಲ ಎಂದರೆ ಸಾಕ್ಷಿಯು ನನ್ನ ತಾತ ಇದ್ದಾಗಲೇ ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಮಾರಾಟವಾಗಿರುವ ಆಸ್ತಿಗಳ ಮೇಲೆ ನನ್ನ ತಂದೆ ಮತ್ತು ಅವರ ಸಹೋದರರಾದ ರಮೇಶ್, ನಾಗಭೂಷಣ್ ರವರಿಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿ. ಇನ್ನು ಉಳಿಕೆ ಜಮೀನುಗಳಲ್ಲಿ ಮಾತ್ರ ವಿಭಾಗವಾಗಬೇಕಾಗಿರುತ್ತದೆ ಎಂದರೆ ಸರಿ. ಈಗಾಗಲೇ ಮಾರಾಟ ಮಾಡಿರುವ ಆಸ್ತಿಗಳನ್ನು ಹೊರತುಪಡಿಸಿ ಉಳಿಕೆ ಆಸ್ತಿಗಳಲ್ಲಿ ನನ್ನ ತಂದೆ ಮತ್ತು ಅವರ ಚಿಕ್ಕಪ್ಪಂದಿರ ನಡುವೆ ವಿಭಾಗವಾದ ನಂತರ ನನ್ನ ತಂದೆಯ ಪಾಲಿಗೆ ಬಂದ ಆಸ್ತಿಗಳಲ್ಲಿ ನಮಗೆ ವಿಭಾಗದ ಹಕ್ಕು ಇರುತ್ತದೆ ಎಂದರೆ ಸರಿ.

6 ರಿಂದ 8 ಮತ್ತು 10ನೇ ಪ್ರತಿವಾದಿಯರ ಪರ ಪಾಟೀಸವಾಲಿಗೆ ಸಮಯ ಕೇಳಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇ ಒ**

**(ಕಿರಣ್ ಎಸ್ ಪಿ)**
**2ನೇ ಅಪರ ಸಿವಿಲ್ ನ್ಯಾಯಾಧೀಶರು**
**ಮದ್ದೂರು.**